ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಸಂಖ್ಯೆ:ಕವಿಪ್ರನಿನಿ/ಬಿ66/23615/2021-22 ದಿನಾಂಕ : 4 DEC 2021

## ಸುತ್ತೋಲೆ

ವಿಷಯ: ಡಿಸೆಂಬರ್-2021 ರಲ್ಲಿ ನಡೆಯಲಿರುವ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಗಳ ವೇಳಾಪಟ್ಟಿ.

ಉಲ್ಲೇಖ: ನಿಗಮ ಕಾರ್ಯಾಲಯ, ಕವಿಪ್ರನಿನಿ ಸುತ್ತೋಲೆ ಸಂಖ್ಯೆ:ಕವಿಪ್ರನಿನಿ/ಬಿ66/23615/2021-22 ದಿನಾಂಕ 01.10.2021.

**********

ಡಿಸೆಂಬರ್-2021 ರಲ್ಲಿ ನಡೆಯಲಿರುವ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಗಳ ವೇಳಾಪಟ್ಟಿಯು ಈ ಕೆಳಕಂಡಂತಿದೆ.

**ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಗಳ ವೇಳಾಪಟ್ಟಿ**

| ದಿನಾಂಕ | ಸಮಯ | ಪರೀಕ್ಷೆ | ಸಂಕ್ಷಿಪ್ತವಾಗಿ ವಿಷಯ |
|---|---|---|---|
| 19.12.2021 ಭಾನುವಾರ | ಬೆ. 9.30 ರಿಂದ ಮ.12.30 ರವರೆಗೆ | ಎಕ್ಸಿಕ್ಯೂಟಿವ್ ಲೋಯರ್ ಪತ್ರಿಕೆ-1 | ಕಚೇರಿ ಕಾರ್ಯವಿಧಾನಗಳು, ಸಾರಾಂಶ ಲೇಖನ ಮತ್ತು ಕರಡು ತಯಾರಿಕೆ, ಪಾಲನೆ ಮತ್ತು ನಿರ್ವಹಣೆ ಕೈಪಿಡಿ, ಉಗ್ರಾಣ ಕೈಪಿಡಿ ಮತ್ತು ಸುರಕ್ಷಾ ಕೈಪಿಡಿ, |
| | ಮ. 2.30 ರಿಂದ ಸಂ.5.30 ರವರೆಗೆ | ಎಕ್ಸಿಕ್ಯೂಟಿವ್ ಲೋಯರ್ ಪತ್ರಿಕೆ-2 | ಕವಿಮಂ ಲೆಕ್ಕ ಸಂಹಿತೆ ಸಂಪುಟ I & II, ಅಧಿಕಾರ ಪ್ರತ್ಯಾಯೋಜನೆ ಕೈಪಿಡಿ, ಕ.ವಿ.ಮಂ. ನೌಕರರ ಸೇವಾ ನಿಯಮಾವಳಿಗಳು, ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ವಿದ್ಯುಚ್ಛಕ್ತಿ ಅಧಿನಿಯಮ-2003, ಕಂಡೀಷನ್ಸ್ ಆಫ್ ಸಪ್ಲೈ ಆಫ್ ಎಲೆಕ್ಟ್ರಿಸಿಟಿ ಆಫ್ ಡಿಸ್ಟ್ರಿಬ್ಯೂಷನ್ ಲೈಸೆನ್ಸೀಸ್ ಇನ್ ದ ಸ್ಟೇಟ್ ಆಫ್ ಕರ್ನಾಟಕ, ಕಂಪನಿಗಳ ಅಧಿನಿಯಮ-2013, ಆರ್ಥಿಕ ನಿರ್ವಹಣೆ, ಮಾನವ ಸಂಪನ್ಮೂಲ ಅಭಿವೃದ್ಧಿ. |

**I. ಅಭ್ಯರ್ಥಿಗಳಿಗೆ ಅತಿ ಮುಖ್ಯ ಸೂಚನೆ:** ಈ ಕೆಳಕಂಡ ಪ್ರಶ್ನೆಪತ್ರಿಕೆಗಳಲ್ಲಿ 2 ರೀತಿಯ ಪ್ರಶ್ನೆಗಳಿರುತ್ತವೆ.

**ಎಕ್ಸಿಕ್ಯೂಟಿವ್ ಲೋಯರ್ -- ಪತ್ರಿಕೆ-2**

1) ಆಬ್ಜೆಕ್ಟೀವ್ ಮಾದರಿ ಪ್ರಶ್ನೆಗಳು (Objective Type Questions) - (For 40 marks)

2) ವಿವರಣಾತ್ಮಕ ಮಾದರಿ ಪ್ರಶ್ನೆಗಳು (Descriptive Type Questions) - (For 60 marks)

- ಆಬ್ಜೆಕ್ಟೀವ್ ಮಾದರಿ ಪ್ರಶ್ನೆಪತ್ರಿಕೆಯಲ್ಲಿ ವಿವಿಧ ಆಯ್ಕೆಯ (Multiple Choice) ಪ್ರಶ್ನೆಗಳು ಇರುತ್ತವೆ ಮತ್ತು ಅವುಗಳನ್ನು ಪ್ರತ್ಯೇಕವಾದ **ಒ.ಎಂ.ಆರ್** ಉತ್ತರಪತ್ರಿಕೆಯಲ್ಲಿ ಉತ್ತರಿಸಬೇಕಾಗಿರುತ್ತದೆ. ಈ ಉತ್ತರಪತ್ರಿಕೆಯನ್ನು ಅಭ್ಯರ್ಥಿಗಳಿಗೆ ಪರೀಕ್ಷೆಯ ಸಮಯದಲ್ಲಿ ಒದಗಿಸಲಾಗುತ್ತದೆ.
- **ಈ** Multiple Choice **ಪ್ರಶ್ನೆಗಳನ್ನು ಉತ್ತರಿಸಲು ಅಭ್ಯರ್ಥಿಗಳಿಗೆ ಮೊದಲ 1 ಗಂಟೆ ಸಮಯ ನೀಡಲಾಗುತ್ತದೆ ಹಾಗೂ 1 ಗಂಟೆಯ ನಂತರ ಈ** Multiple Choice ಉತ್ತರ **ಪತ್ರಿಕೆಗಳನ್ನು ಅಭ್ಯರ್ಥಿಗಳಿಂದ ವಾಪಸ್ ಪಡೆಯಲಾಗುತ್ತದೆ.**

## II. ಅಭ್ಯರ್ಥಿಗಳಿಗೆ ಹೆಚ್ಚುವರಿ ಸೂಚನೆಗಳು

1. **ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆಯನ್ನು ಉತ್ತರ ಪುಸ್ತಕದ ನಿಗದಿತ ಸ್ಥಳದಲ್ಲಿ ಮಾತ್ರ ನಮೂದಿಸಬೇಕು. ಆತ/ಆಕೆ ಹೆಚ್ಚುವರಿ ಹಾಳೆಯಲ್ಲಾಗಲಿ ಅಥವಾ ಉತ್ತರ ಪುಸ್ತಕದ ಯಾವುದೇ ಭಾಗದಲ್ಲಾಗಲಿ ತಮ್ಮ ನೋಂದಣಿ ಸಂಖ್ಯೆಯನ್ನು ಬರೆಯಬಾರದು.**
2. ಅಭ್ಯರ್ಥಿಗಳು ಉತ್ತರ ಪುಸ್ತಕ ಅಥವಾ ಹೆಚ್ಚುವರಿ ಹಾಳೆಯಲ್ಲಾಗಲಿ ತಮ್ಮ ಹೆಸರು/ಯಾವುದೇ ದೇವರ ಹೆಸರನ್ನು/ಧಾರ್ಮಿಕ ಚಿಹ್ನೆಯನ್ನು/ಯಾವ ತರಹದ ಗುರುತನ್ನು ಬರೆಯಬಾರದು/ ಮಾಡಬಾರದು.
3. ಪರೀಕ್ಷಾ ಸಭಾಂಗಣದಲ್ಲಿ ಮುಖ್ಯಪರಿವೀಕ್ಷಕರು/ ಪರಿವೀಕ್ಷಕರು ಯಾವಾಗ ಕೇಳಿದರೂ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಹಾಜರುಪಡಿಸಬೇಕು.
4. ಪರೀಕ್ಷೆಯು ಪ್ರಾರಂಭವಾಗುವುದಕ್ಕೆ ಹತ್ತು ನಿಮಿಷಗಳ ಮುಂಚೆಯೇ ಅಭ್ಯರ್ಥಿಗಳು ತಮ್ಮ ಸ್ಥಳಗಳಲ್ಲಿರಬೇಕು.
5. ಅಭ್ಯರ್ಥಿಗಳು ಲೇಖನಿ/ಪೆನ್ನುಗಳನ್ನು ತಾವೇ ತರಬೇಕು.
6. ಪರೀಕ್ಷೆಯು ಪ್ರಾರಂಭವಾದ ಅರ್ಧಗಂಟೆಯ ನಂತರ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಲು ಹಾಗೂ ಪರೀಕ್ಷೆಯು ಪ್ರಾರಂಭವಾದ ನಂತರ ಅರ್ಧಗಂಟೆಗಿಂತ ಮುಂಚಿತವಾಗಿ ಯಾವುದೇ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅನುಮತಿ ಕೊಡಲಾಗುವುದಿಲ್ಲ. ಪರೀಕ್ಷೆ ನಡೆಯುವ ಸಮಯದಲ್ಲಿ ಅಭ್ಯರ್ಥಿಗಳು ಮಾತನಾಡುವುದಾಗಲಿ ಅಥವಾ ಯಾವುದೇ ರೀತಿ ಸಂಪರ್ಕಿಸುವುದನ್ನಾಗಲಿ ಮಾಡಬಾರದು.
7. ಪಠ್ಯಪುಸ್ತಕಗಳು, ಮಾರ್ಗದರ್ಶಿಕೆಗಳು (ಕೈಪಿಡಿಗಳು) ಟಿಪ್ಪಣಿಗಳು ಮುಂತಾದವುಗಳನ್ನು ಪರೀಕ್ಷಾ ಕೊಠಡಿಯ ಒಳಗೆ ತರುವಂತಿಲ್ಲ.
8. ಅಭ್ಯರ್ಥಿಗಳು ಪ್ರತಿ ಪತ್ರಿಕೆಯ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಯಾವುದಾದರೂ ಒಂದು ಭಾಷೆ (ಕನ್ನಡ ಅಥವಾ ಇಂಗ್ಲೀಷ್) ಯಲ್ಲಿ ಉತ್ತರಿಸಲು ಅನುಮತಿ ನೀಡಲಾಗಿದೆ. ಈ ನಿಯಮವನ್ನು ಉಲ್ಲಂಘಿಸಿ ಭಾಗಶ: ಕನ್ನಡ ಹಾಗೂ ಭಾಗಶ: ಇಂಗ್ಲೀಷ್ ಭಾಷೆಯಲ್ಲಿ ಉತ್ತರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಆದಾಗ್ಯೂ ಎರಡು ಭಾಷೆಗಳಲ್ಲಿ ಉತ್ತರಿಸಿದ ಪಕ್ಷದಲ್ಲಿ ಒಂದು ಭಾಷೆಯ ಉತ್ತರವನ್ನು ಮಾತ್ರ ಪರಿಗಣಿಸಿ ಮೌಲ್ಯಮಾಪನ ಮಾಡಲಾಗುವುದು.
9. ಅಭ್ಯರ್ಥಿಗಳು ಮಾರ್ಜಿನ್ ಎಳೆಯಲು, ಉತ್ತರಗಳಿಗೆ ಕೆಳಗೆರೆ ಹಾಕಲು ಅಥವಾ ಪ್ರಶ್ನೆಗಳ ಸಂಖ್ಯೆ ಬರೆಯಲು ಅಥವಾ ಶೀರ್ಷಿಕೆಗಳು ಇತ್ಯಾದಿಗಳನ್ನು ಬರೆಯಲು ಬಣ್ಣದ ಇಂಕಿನ ಪೆನ್ನು / ಡಾಟ್‌ಪೆನ್ನು ಅಥವಾ ಮತ್ತಾವುದೇ ಹೆಚ್ಚಿನ ರೀತಿಯಲ್ಲಿ ಗುರುತು ಮಾಡುವ ಪೆನ್ನುಗಳನ್ನು ಬಳಸಕೂಡದು. ಎಲ್ಲಾ ಉತ್ತರಗಳನ್ನು ನೀಲಿ / ಕಪ್ಪು ಇಂಕ್ ಪೆನ್ನು ಅಥವಾ ಆ ಬಣ್ಣದ ರೀಫಿಲ್ ಇರುವ ಡಾಟ್ ಪೆನ್ನುಗಳಲ್ಲಿ ಉತ್ತರಿಸಬೇಕು. ಉತ್ತರ ಬರೆಯುವ ವೇಳೆಯಲ್ಲಿ ಯಾವುದೇ ಕಾರಣದಿಂದ ಸ್ವಲ್ಪ ಬೇರೆಯ ಬಣ್ಣದ ಇಂಕಿನ ಪೆನ್ನು ಬದಲಾಯಿಸಿದಾಗ ಅದನ್ನು ಪರಿವೀಕ್ಷಕರ ಗಮನಕ್ಕೆ ತಂದು, ಅವರಿಂದ ಅನುಪ್ರಮಾಣ ಮಾಡಿಸಬೇಕು.

10. ಉತ್ತರಪತ್ರಿಕೆಯ ಎಡಭಾಗದ ಮಾರ್ಜಿನ್‌ನಲ್ಲಿ ಪ್ರಶ್ನೆಪತ್ರಿಕೆಯಲ್ಲಿರುವ ರೀತಿಯಲ್ಲೇ ಪ್ರಶ್ನೆಗಳ ಸಂಖ್ಯೆಯನ್ನು ನಮೂದಿಸಿ, ಸಂಬಂಧಿಸಿದ ಉತ್ತರಗಳನ್ನು ಬರೆಯತಕ್ಕದ್ದು.

11. ಯಾವುದೇ ಉತ್ತರಪತ್ರಿಕೆಯಲ್ಲಿ ಪ್ರಶ್ನೆಯ ಸಂಖ್ಯೆ ಮತ್ತು ಅದಕ್ಕೆ ಸಂಬಂಧಿಸಿದ ಉತ್ತರ ಮಾತ್ರ ಇರತಕ್ಕದ್ದು ಮತ್ತು ಪುಟಗಳಿಗೆ ಪುಟ ಸಂಖ್ಯೆ ನಮೂದಿಸತಕ್ಕದ್ದು. ಸಾಮಾನ್ಯವಾಗಿ ಉತ್ತರಪತ್ರಿಕೆಯಲ್ಲಿ ಬರೆಯಬಾರದ ಅಲಂಕಾರದ ಬರವಣಿಗೆ, ಕಲಾತ್ಮಕ ಬರವಣಿಗೆ (ಅಭ್ಯರ್ಥಿಯ ಸಹಜ ಕೈಬರಹವನ್ನು ಹೊರತು ಪಡಿಸಿ), ಗುರುತು, ರೇಖೆಗಳು, ಹೊಡೆದು ಹಾಕಿದ ಗೆರೆ, ಇಂಕ್ ಗುರುತು ಸಹಿ ಅಥವಾ ಘೋಷಣೆಗಳನ್ನು ಅಭ್ಯರ್ಥಿಯು ತನ್ನ ಗುರುತನ್ನು ಬಹಿರಂಗಗೊಳಿಸಲು ನಡೆಸಿದ ಪ್ರಯತ್ನ ಎಂದು ಪರಿಗಣಿಸಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಅಭ್ಯರ್ಥಿಯಿಂದ ಯಾವುದೇ ವಿವರಣೆಯನ್ನು ಕೇಳದೆ ದಂಡ ಪ್ರಕ್ರಿಯೆ ಕೈಗೊಳ್ಳಲಾಗುವುದು. ಇಲಾಖಾ ಪರೀಕ್ಷಾ ಮಂಡಳಿಯ ತೀರ್ಮಾನವೇ ಅಂತಿಮವಾಗಿದ್ದು, ಯಾವುದೇ ರೀತಿಯ ಅಜ್ಞಾನ ಅಥವಾ ಅಜಾಗರೂಕತೆ ಅಥವಾ ಕಣ್ತಪ್ಪಿನ ಮನವಿಗಳನ್ನು ಪರಿಗಣಿಸುವುದಿಲ್ಲ. ಆದ್ದರಿಂದ **ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಪತ್ರಿಕೆಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೆ ಗಮನಿಸಿ, ಪಾಲಿಸತಕ್ಕದ್ದು ಮತ್ತು ಪರಿವೀಕ್ಷಕರು ಪರೀಕ್ಷಾ ಕೊಠಡಿಗಳಲ್ಲಿ ನೀಡುವ ಸೂಚನೆಗಳನ್ನು ಸಹ ಎಚ್ಚರಿಕೆಯಿಂದ ಪಾಲಿಸತಕ್ಕದ್ದು.**

12. ಮೊಬೈಲ್ ಫೋನ್‌ಗಳನ್ನು ಪರೀಕ್ಷಾ ಕೊಠಡಿಗೆ ತರುವುದನ್ನು ನಿಷೇಧಿಸಲಾಗಿದೆ.

**ದಿನಾಂಕ:19.12.2021 ರಂದು 14 ವೃತ್ತಗಳಲ್ಲಿ ನಡೆಯಲಿರುವ ಇಲಾಖಾ ಪರೀಕ್ಷಾ ಕೇಂದ್ರದ ವಿವರ:**

| ಕ್ರ. ಸಂ. | ಇಲಾಖಾ ಪರೀಕ್ಷೆ ನಡೆಯುವ ವೃತ್ತ | ಪರೀಕ್ಷೆ ನಡೆಯುವ ಕೇಂದ್ರದ ಹೆಸರು |
|---|---|---|
| 1 | ಕಾರ್ಯ ಮತ್ತು ಪಾಲನಾ (ಉತ್ತರ) ವೃತ್ತ, ಬೆವಿಕಂ, ಬೆಂಗಳೂರು | ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ (ಡೈನಿಂಗ್ ಹಾಲ್), ಆನಂದ್‌ರಾವ್ ವೃತ್ತ, ಬೆಂಗಳೂರು |
| 2 | ಕಾರ್ಯ ಮತ್ತು ಪಾಲನಾ (ದಕ್ಷಿಣ) ವೃತ್ತ, ಬೆವಿಕಂ, ಬೆಂಗಳೂರು | ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಆನಂದ್‌ರಾವ್ ವೃತ್ತ, ಎಸ್.ಜೆ.ಬಿ ಸಭಾಂಗಣ, ಬೆಂಗಳೂರು. |
| 3 | ಕಾರ್ಯ ಮತ್ತು ಪಾಲನಾ ವೃತ್ತ, ಬೆವಿಕಂ, ಕೋಲಾರ | ಶ್ರೀ ನಂದಗೋಕುಲ ಸ್ಕೂಲ್ ಆಫ್ ನರ್ಸಿಂಗ್, ಪಿ.ಜಿ ಬ್ಲಾಕ್, ಗೋಕುಲ್ ನಗರ, ಕೋಲಾರ. |
| 4 | ವಾ, ಕಾರ್ಯ ಮತ್ತು ಪಾಲನಾ ವೃತ್ತ, ಬೆವಿಕಂ,ತುಮಕೂರು | ಶ್ರೀ ಸಿದ್ದಗಂಗಾ ತಾಂತ್ರಿಕ ಮಹಾವಿದ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು. |
| 5 | ಕಾರ್ಯ ಮತ್ತು ಪಾಲನಾ ವೃತ್ತ, ಬೆವಿಕಂ, ದಾವಣಗೆರೆ | ಬಾಪೂಜಿ ಪಾಲಿಟೆಕ್ನಿಕ್ ಶಾಬನೂರು, ವಿವೇಕಾನಂದ ಬಡಾವಣೆ, ದಾವಣಗೆರೆ. |
| 6 | ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು | ಕೆ.ಇ.ಬಿ, ಇಂಜಿನಿಯರ್ಸ್ ಅಸೋಸಿಯೇಶನ್ ಆವರಣ, ಕಡಕೋಳ, ಮೈಸೂರು. |
| 7 | ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಹಾಸನ | ಮಲ್ನಾಡ್ ಕಾಲೇಜ್ ಆಫ್ ಇಂಜಿನಿಯರಿಂಗ್, ಸಾಲಗಾಮೆ ರಸ್ತೆ, ಹಾಸನ |
| 8 | ಕಾರ್ಯ ಮತ್ತು ಪಾಲನಾ ವೃತ್ತ, ಮಂವಿಸಕಂ, ಶಿವಮೊಗ್ಗ | ದೇಶೀಯ ವಿದ್ಯಾ ಶಾಲ ಸಮಿತಿ ಪದವಿ ಪೂರ್ವ (ಸ್ವತಂತ್ರ) ಕಾಲೇಜು, ಕುವೆಂಪು ರಂಗಮಂದಿರದ ಪಕ್ಕದಲ್ಲಿ, ಬಸವೇಶ್ವರ ವೃತ್ತ, ಶಿವಮೊಗ್ಗ. |
| 9 | ಕಾರ್ಯ ಮತ್ತು ಪಾಲನಾ ವೃತ್ತ, ಮಂವಿಸಕಂ, ಮಂಗಳೂರು | ಮನೆಲ್ ಶ್ರೀನಿವಾಸ ನಾಯಕ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ (MSNIM), ಬೆಸೆಂಟ್ ಕ್ಯಾಂಪಸ್, ಬೋಂದೆಲ್, ಮಂಗಳೂರು. |
| 10 | ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂ, ಹುಬ್ಬಳ್ಳಿ | ಶ್ರೀ ಎಂ.ಆರ್ ಸಾಕರೆ ಆಂಗ್ಲ ಮಾಧ್ಯಮ ಶಾಲೆ, ಉಣಕಲ್ ಕ್ರಾಸ್, ವಿದ್ಯಾನಗರ, ಹುಬ್ಬಳ್ಳಿ. |
| 11 | ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂ, ಬೆಳಗಾವಿ | ಆರ್.ಎನ್ ಶೆಟ್ಟಿ ಪಾಲಿಟೆಕ್ನಿಕ್ ಕಾಲೇಜ್, ಶಿವಬಸವನ ನಗರ, ಬೆಳಗಾವಿ. |

| | | |
|---|---|---|
| 12 | ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂ, ವಿಜಯಪುರ. | ಅಂಜುಮಾನ್ ಕಾನೂನು ಮಹಾವಿದ್ಯಾಲಯ, ಮನಗೂಳಿ ರಸ್ತೆ, ವಿಜಯಪುರ. |
| 13 | ಕಾರ್ಯ ಮತ್ತು ಪಾಲನಾ ವೃತ್ತ, ಗುವಿಸಕಂ, ಕಲಬುರಗಿ. | ಪೂಜ್ಯ ದೊಡ್ಡಪ್ಪ ಅಪ್ಪ ತಾಂತ್ರಿಕ ಮಹಾವಿದ್ಯಾಲಯ, ಐವಾನ್-ಇ-ಶಾಹಿ ರೋಡ್, ಕಲಬುರಗಿ. |
| 14 | ಕಾರ್ಯ ಮತ್ತು ಪಾಲನಾ ವೃತ್ತ, ಗುವಿಸಕಂ, ಬಳ್ಳಾರಿ | ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಕ ಮಹಾವಿದ್ಯಾಲಯ, ಕಂಟೋನ್ ಮೆಂಟ್, ಹೊಸಪೇಟೆ ರಸ್ತೆ, ಬಳ್ಳಾರಿ. |

2. ಪರೀಕ್ಷೆ ನಡೆಸುವ ಸ್ಥಳದ ವಿವರಗಳನ್ನು ಪರೀಕ್ಷೆ ನಡೆಸುವ ಎಲ್ಲಾ ವೃತ್ತಗಳು ತಮ್ಮ ಅಧೀನಕ್ಕೆ ಬರುವ ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳಿಗೆ ಹಾಗೂ ಎಲ್ಲಾ ಅಭ್ಯರ್ಥಿಗಳಿಗೆ ಸುತ್ತೋಲೆ ಮುಖಾಂತರ ತಿಳಿಯಪಡಿಸುವುದು.

14/12/21

**ಪ್ರಧಾನ ವ್ಯವಸ್ಥಾಪಕರು ಮತ್ತು ಸದಸ್ಯ ಕಾರ್ಯದರ್ಶಿ,**
**ಇಲಾಖಾ ಪರೀಕ್ಷಾ ಮಂಡಳಿ, ಕವಿಪ್ರನಿನಿ**